ಹಿಂದುಳಿದ ವರ್ಗಗಳ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆಯುತ್ತಿರುವ ಸೌಲಭ್ಯಗಳು

28 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಭಾಲ್ಕಿ)

ಶ್ರೀ ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ಬೀದರ್ ಜಿಲ್ಲೆ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಎಷ್ಟು ಜನ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ರಿಯಾಯಿತಿ (Fee concession) ಯೋಜನೆಯ ಲಾಭ ದೊರೆತಿದೆ; ಇದಕ್ಕಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಶುಲ್ಕ ಮರು ಪಾವತಿ ಮಾಡಿದ ವಿವರಗಳು ಈ ಕೆಳಕಂಡಂತಿವೆ.

1. ಶುಲ್ಕ ಮರುಪಾವತಿ ಮಾಡಿದೆ.

   ವಿದ್ಯಾರ್ಥಿಗಳ ಸಂಖ್ಯೆ : 232

2. ಪಾವತಿ ಮಾಡಿದ ಹಣ :

   ರೂ.30,84,060/-

(ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ ಈ ಅವಧಿಯಲ್ಲಿ ಇನ್ನೂ ಎಷ್ಟು ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ (Fee concession) ಯೋಜನೆಯ ಸೌಲಭ್ಯ ದೊರೆಯಬೇಕಾಗಿದೆ; ಇದನ್ನು ಯಾವಾಗ ಬಿಡುಗಡೆ ಮಾಡಲಾಗುವುದು; ಎಷ್ಟು ಅವಧಿಯಿಂದ ಇದು ಬಾಕಿ ಇದೆ?

374 ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿಸಬೇಕಾಗಿದೆ. ಬಾಕಿ ಇರುವ ಶುಲ್ಕ ಮರು ಪಾವತಿಗಾಗಿ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಬಿಡುಗಡೆ ಆದ ಕೂಡಲೇ ಬಾಕಿ ಬಿಲ್ಲುಗಳನ್ನು ಇತ್ಯರ್ಥಗೊಳಿಸಲಾಗುವುದು. ಈ ಕಾರ್ಯಕ್ರಮದಡಿ 2005-06ನೇ ಸಾಲಿನಿಂದ 2007-08ನೇ ಸಾಲಿನ ವರೆಗಿನ ಬಿಲ್ಲುಗಳು ಬಾಕಿ ಇರುತ್ತದೆ.

ಬೀದರ್ ಜಿಲ್ಲೆಯ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳ ಅವಧಿಯಲ್ಲಿ ಬಂದಿರುವ ಕ್ಲೈಮುಗಳ ಮೊತ್ತ, ಪಾವತಿಸಿದ ಶುಲ್ಕ ಹಾಗೂ ಬಾಕಿ ಇರುವ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ವರ್ಷ	ಸ್ವೀಕರಿಸಿದ ಕ್ಲೇಮುಗಳ ಒಟ್ಟು ಮೊತ್ತ	ಸ್ವೀಕರಿಸಿದ ಕ್ಲೇಮುಗಳ ವಿದ್ಯಾರ್ಥಿಗಳ ಸಂಖ್ಯೆ	ಪಾವತಿಸಿದ ಶುಲ್ಕದ ಒಟ್ಟು ಮೊತ್ತ	ಶುಲ್ಕ ಮರು ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ	ಬಾಕಿ ಪಾವತಿಸಿ ಬೇಕಾದ ಮೊತ್ತ	ಬಾಕಿ ಪಾವತಿಸ ಬೇಕಾದ ವಿದ್ಯಾರ್ಥಿಗಳ ಸಂಖ್ಯೆ
1	2	3	4	5	6	7	8
1	2005 –06	11,24,180	135	5,28,680	63	5,95,500	72
2	2006 –07	25,71,380	170	25,55,380	169	16,000	01
3	2007 –08	58,48,520	301	–	–	52,48,520	301
ಒಟ್ಟು		**95,44,080**	**606**	**30,84,060**	**232**	**64,60,020**	**374**

31 ಶ್ರೀ ಖಾದರ್. ಯು.ಟಿ.(ಮಂಗಳೂರು)

ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಸಚಿವರು)

ಅ ರಾಜ್ಯದಲ್ಲಿ ದರ್ಜಿ [ಟೈಲರಿಂಗ್] ವೃತ್ತಿಯಿಂದ ಜೀವನ ಸಾಗಿಸುತ್ತಿರುವ ಕಾರ್ಮಿಕರಿಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು ದರ್ಜಿಗಳ "ಕಲ್ಯಾಣ ನಿಧಿ" ಯನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?

ದರ್ಜಿ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರನ್ನಾಗಿ ಗುರುತಿಸಲಾಗಿರುತ್ತದೆ.

ಭಾರತ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಅಸಂಘಟಿತ ಕಾರ್ಮಿಕರ ಸಮಾಜಿಕ ಭದ್ರತೆಯ ಕಾಯಿದೆ–2008ನ್ನು ರಚಿಸಿದೆ.

ಸದರಿ ಕಾಯ್ದೆಗೆ ನಿಯಮಗಳನ್ನು ಕೇಂದ್ರ ಸರ್ಕಾರವರು ರೂಪಿಸ ಬೇಕಾಗಿದೆ. ಕಾಯಿದೆ ಕಲಂ 1[3] ರಲ್ಲಿ ಕೇಂದ್ರ ಸರ್ಕಾರ ತನ್ನ ಅಧಿಕೃತ ರಾಜ್ಯ ಪತ್ರದಲ್ಲಿ ಅಧಿ ಸೂಚನೆ ಹೊರಡಿಸಿದ ದಿನಾಂಕದಿಂದ ಕಾನೂನು ಜಾರಿಗೆ ಬರುತ್ತದೆ